**Friday 23rd December 2022, Page No.04**

**The 3-day International Conference on Sustainable Solutions through Information Technology and Computerization organized at RV College of Engineering was launched on Thursday.**

**ಸಮ್ಮೇಳನ** | ಗ್ಲೋಬಲ್ ಫೌಂಡ್ರಿಸ್ ಸಂಸ್ಥೆಯ ಡಾ| ದೇವೇಶ್ ದ್ವಿವೇದಿ ಸಲಹೆ

# ‘ವಿದ್ಯಾರ್ಥಿಗಳು ಹೆಚ್ಚು ಲೇಖನ ಪ್ರಕಟಿಸಿ’

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಫ್ಲೋರಿಡಾ ವಿಶ್ವವಿದ್ಯಾಲಯ, ಬೆಂಗಳೂರು ವಿಭಾಗದ ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರ್ಸ್ (ಐಇಇಇ) ಸಹಯೋಗದಲ್ಲಿ ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ಆರನೇ ‘ಮಾಹಿತಿ ತಂತ್ರಜ್ಞಾನ ಹಾಗೂ ಗಣಕೀಕೃತ ವ್ಯವಸ್ಥೆಯ ಮೂಲಕ ಸುಸ್ಥಿರ ಪರಿಹಾರಗಳು’ (ಸಿಎಸ್ ಐಟಿಎಸ್‌ಎಸ್) ಕುರಿತ ಮೂರು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಗುರುವಾರ ಚಾಲನೆ ನೀಡಲಾಯಿತು.

ಗ್ಲೋಬಲ್ ಫೌಂಡ್ರಿಸ್ ಸಂಸ್ಥೆಯ ಭಾರತ ವಿಭಾಗದ ಮುಖ್ಯಸ್ಥ ಡಾ| ದೇವೇಶ್ ದ್ವಿವೇದಿ ಮಾತನಾಡಿ, ಈಗಿನ ಪರಿಸ್ಥಿತಿಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು ಮಾತ್ರವಲ್ಲದೆ ಪದವಿ ವಿದ್ಯಾರ್ಥಿಗಳೂ ಸಹ ಸಂಶೋಧನಾ ಲೇಖನಗಳನ್ನು ಹೆಚ್ಚು ಪ್ರಕಟಿಸಬೇಕು ಎಂದರು.

ಫ್ಲೋರಿಡಾ ಅಂತಾರಾಷ್ಟ್ರೀಯ ವಿದ್ಯಾಲಯದ ಪ್ರಾಧ್ಯಾಪಕ ಎಸ್.ಎಸ್.ಐಯ್ಯಂಗಾರ್ ಮತ್ತು ಐಬಿಎಂ ಭಾರತದ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ| ವೆಂಕಟ ಸುಬ್ರಮಣಿಯನ್ ಮಾತನಾಡಿ, ಸಮ್ಮೇಳನಕ್ಕೆ ಶುಭಹಾರೈಸಿದರು. ಐಇಇಇ ಬೆಂಗಳೂರು ವಿಭಾಗದ ಅಧ್ಯಕ್ಷೆ ಡಾ| ದೀಪಾ ಶೆಣೈ, ಸಮ್ಮೇಳನದ ಸಭಾಧ್ಯಕ್ಷ ಡಾ| ಎಂ.ಪಿ.ಶ್ಯಾಮ್, ಆರ್.ವಿ.ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ| ಕೆ.ಎನ್. ಸುಬ್ರಹ್ಮಣ್ಯ, ಉಪಪ್ರಾಂಶುಪಾಲರಾದ ಡಾ| ಕೆ.ಎಸ್. ಗೀತಾ, ವಿದ್ಯುನ್ಮಾನ ಹಾಗೂ ಸಂವಹನ ವಿಭಾಗದ ಮುಖ್ಯಸ್ಥ ಡಾ| ರವೀಶ್, ಸಮ್ಮೇಳನದ ಕಾರ್ಯದರ್ಶಿಗಳಾದ ಡಾ| ಕೆ.ಎಸ್.ಶುಶ್ರುತಾ, ಡಾ| ಎನ್.ಶೈಲಾ ಉಪಸ್ಥಿತರಿದ್ದರು.



ನಗರದ ಆರ್.ವಿ.ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ಆರನೇ ‘ಮಾಹಿತಿ ತಂತ್ರಜ್ಞಾನ ಹಾಗೂ ಗಣಕೀಕೃತ ವ್ಯವಸ್ಥೆಯ ಮೂಲಕ ಸುಸ್ಥಿರ ಪರಿಹಾರಗಳು’ (ಸಿಎಸ್‌ಐಟಿಎಸ್‌ಎಸ್) ಕುರಿತ ಮೂರು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಗುರುವಾರ ಚಾಲನೆ ನೀಡಲಾಯಿತು.